( ಸದನವು ಪುನ: 2.49 ನಿಮಿಷಕ್ಕೆ ಸಮಾವೇಶಗೊಂಡಾಗ ಸನ್ಮಾನ್ಯ ಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿದ್ದರು)

**3. ಕಬ್ಬಿಗೆ ಬೆಲೆ ನಿಗದಿ ಮಾಡುವ ವಿಚಾರವಾಗಿ ಚರ್ಚೆಗೆ ತೆಗೆದುಕೊಳ್ಳಲು ಮನವಿ.**

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಅಧ್ಯಕ್ಷರೆ, ಕಬ್ಬು ಬೆಳೆಗಾರರ ಬಗ್ಗೆ...

**ಅಧ್ಯಕ್ಷರು:-** Same subject, ಮೊದಲು ಮಾನ್ಯ ರೇವಣ್ಣನವರು ಕೊಟ್ಟಿದ್ದಾರೆ.

**ಶ್ರೀ ಹೆಚ್.ಡಿ.ರೇವಣ್ಣ:-** ಅಡ್ಜರ್ನ್ಮೆಂಟ್ ಮೋಷನ್‌ದಲ್ಲಿ ಮೊದಲು ನಾನು ಕೊಟ್ಟಿದ್ದೇನೆ, ನೋಡಿ ಸರ್.

**ಶ್ರೀ ಸಿದ್ದರಾಮಯ್ಯ:-** ಇಲ್ಲಾ, ನಮಗೆ ಮೆನ್‌ಷನ್ ಮಾಡುವುದಕ್ಕೂ ಬಿಡುವುದಿಲ್ಲವೆಂದರೆ ಹೇಗೆ? ಮಾನ್ಯ ಅಧ್ಯಕ್ಷರೆ, ಕಬ್ಬಿನ ಬೆಲೆ ನಿಗದಿ ಮಾಡಬೇಕೆಂದು ಹೇಳಿ.

**ಅಧ್ಯಕ್ಷರು:-** ಮೊದಲು ರೇವಣ್ಣನವರದು ಇದೆ.

**ಶ್ರೀ ಸಿದ್ದರಾಮಯ್ಯ:-** ನಾನು ಮೊದಲು ಮೆನ್‌ಷನ್ ಮಾಡುತ್ತೇನೆ, ಆಮೇಲೆ ಅವರಿಗೂ ಕೊಡಿ. ನಾನು ಬೇಡವೆಂದು ಹೇಳುವುದಿಲ್ಲ.

**ಶ್ರೀ ಎಸ್.ಸುರೇಶ್‌ಕುಮಾರ್:-** ಮೊದಲು ಪ್ರಶ್ನೋತ್ತರ ಮುಗಿಯಲಿ, ನಂತರ ತೆಗೆದುಕೊಳ್ಳಲಿ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಕಾನೂನು ಮಂತ್ರಿಗಳೇ, ದಯಮಾಡಿ ರೈತರು ಬಹಳ ಕಷ್ಟದಲ್ಲಿದ್ದಾರೆ. ಕಬ್ಬಿನ ಬೆಲೆ ನಿಗದಿ ಮಾಡಬೇಕೆಂದು ಹೇಳಿ ಇಲ್ಲಿನ ರೈತರು ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ. ಇದು ಬಹಳ ಮುಖ್ಯವಾದದ್ದು ಇರುವಾಗ ಪ್ರಶ್ನೋತ್ತರ ವೇಳೆ ಆದ ಮೇಲೆ ತೆಗೆದುಕೊಳ್ಳೋಣ ಎಂದು ಹೇಳಿದರೆ ಹೇಗೆ? ಇದು ಬಹಳ ತೀವ್ರತರವಾಗಿರುವಂಥದ್ದು ಮತ್ತು ಮಹತ್ವದ್ದು ಆಗಿರುವುದರಿಂದ ಪ್ರಶ್ನೋತ್ತರವನ್ನು ಬದಿಗೊತ್ತಿ ತೆಗೆದುಕೊಳ್ಳುವಂಥ ವಿಚಾರ ಇದು. ರೈತರು ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ.

ರೈತರು ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ. ಅನೇಕ ಬಾರಿ ಸರ್ಕಾರ ಮೀಟಿಂಗ್ ಮಾಡಿದೆ. ಅವರ ಕೈಯಲ್ಲಿ ಬೆಲೆ ನಿಗದಿ ಮಾಡುವುದಕ್ಕೆ ಆಗಲಿಲ್ಲ. ಯಾರ ಕೈವಾಡ ಇದೆ ಎನ್ನುವುದು ಗೊತ್ತಿಲ್ಲ. ಇವೆಲ್ಲಾ ಚರ್ಚೆ ಮಾಡಬೇಕಲ್ಲವೇ?

(ಮುಂದಲ)

**ಶ್ರೀ ಹೆಚ್. ಡಿ. ರೇವಣ್ಣ:** – ಮಾನ್ಯ ಅಧ್ಯಕ್ಷರೆ, ನಾವು ನಿಯಮ 60 ರಡಿಯಲ್ಲಿ ಚರ್ಚೆ ಮಾಡಲು ಅರ್ಜಿ ಕೊಟ್ಟಿದ್ದೇವೆ. ನನಗೆ ಮಾತನಾಡಲು ಅವಕಾಶ ಕೊಡಿ.

(ಗೊಂದಲ)

**ಶ್ರೀ ಸಿದ್ದರಾಮಯ್ಯ :–** ನಾನೂ ಕೂಡ ಆ ವಿಷಯದ ಬಗ್ಗೆಯೇ ಹೇಳುತ್ತಿದ್ದೇನೆ.

(ಗೊಂದಲ)

**ಅಧ್ಯಕ್ಷರು:–** ಮೊದಲು ಅವರು ಅರ್ಜಿ ಕೊಟ್ಟಿದ್ದಾರೆ.

(ಗೊಂದಲ)

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಅಧ್ಯಕ್ಷರೆ, Main opposition ನವರಿಗೆ ಯಾವಾಗಲೂ priority ಅಲ್ಲವೇ? ಒಂದು ಸೆಕೆಂಡ್ ಹೆಚ್ಚು ಕಡಿಮೆ ಆದರೆ ಅವರಿಗೆ ಕೊಡುವುದೇ?

(ಗೊಂದಲ)

**ಅಧ್ಯಕ್ಷರು:–** ಅರ್ಧ ಗಂಟೆ ವ್ಯತ್ಯಾಸವಿದೆ.

(ಗೊಂದಲ)

**ಶ್ರೀ ಹೆಚ್.ಡಿ.ರೇವಣ್ಣ:–** ನಾನು ಮಾತನಾಡಿದ ಮೇಲೆ ಬೇಕಾದರೆ ಮಾನ್ಯ ಸಿದ್ದರಾಮಯ್ಯನವರು ಮಾತನಾಡಲಿ.

(ಗೊಂದಲ)

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಅಧ್ಯಕ್ಷರು ಹೆಸರು Mention ಮಾಡಿದ ಮೇಲೆ ಏನು ತೀರ್ಮಾನ ತೆಗೆದುಕೊಳ್ಳುತ್ತಾರೋ ತೆಗೆದುಕೊಳ್ಳಲಿ.

(ಗೊಂದಲ)

**ಶ್ರೀ ಎಸ್.ಸುರೇಶ್ ಕುಮಾರ್ (ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ವಿಧಾನಮಂಡಲ ಮತ್ತು ನಗರಾಭಿವೃದ್ಧಿ, ಪೌರಾಡಳಿತ ಹಾಗೂ ಸ್ಥಳೀಯ ಸಂಸ್ಥೆಗಳ ಮತ್ತು ಬೆಂಗಳೂರು ಜಲಮಂಡಳಿ ಸಚಿವರು):** ಮೊದಲು ಪ್ರಶ್ನೋತ್ತರ ಮಾಡಿ ಆನಂತರ ಪ್ರಾರಂಭ ಮಾಡಲಿ.

(ಗೊಂದಲ)

**ಶ್ರೀ ಸಿದ್ದರಾಮಯ್ಯ:–** ಕಾನೂನು ಮಂತ್ರಿಯವರು ಈ ರೀತಿ ಅಡ್ಡ ಬರಬಾರದು.

(ಗೊಂದಲ)

**ಶ್ರೀ ಎಸ್.ಸುರೇಶ್ ಕುಮಾರ್:–** ನಾನು issue ಬಗ್ಗೆ ಮಾತನಾಡುತ್ತಿಲ್ಲ. ವಿಷಯದ ಗಂಭೀರತೆ ಬಗ್ಗೆ ನಾನು ಮಾತನಾಡುತ್ತಿಲ್ಲ. ಪ್ರಶ್ನೋತ್ತರ ಆದ ಮೇಲೆ ಚರ್ಚೆ ಪ್ರಾರಂಭ ಮಾಡಲಿ.

(ಗೊಂದಲ)

**SRI. SIDDARAMAIAH:-** This is not correct. ಇದು ಅತ್ಯಂತ ಜುರೂರಾದಂತಹ ವಿಚಾರ. ಇವತ್ತು ರೈತರು ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ. ಜಿಲ್ಲಾಧಿಕಾರಿಯವರ ಕಛೇರಿ ಬಳಿ ಚಳುವಳಿ ಕೂತಿದ್ದಾರೆ. ಇಡೀ ರಾಜ್ಯದಲ್ಲಿ ರೈತರು ಚಳುವಳಿ ಮಾಡುತ್ತಿದ್ದಾರೆ. ಅವರು ಬೆಳೆದಿರುವ ಕಬ್ಬಿನ ಬೆಳೆಗೆ ನ್ಯಾಯಯುತವಾದ ಬೆಲೆ ಸಿಗುತ್ತಿಲ್ಲ. ಸರ್ಕಾರ ನಿಗದಿ ಮಾಡುವಂತಿಲ್ಲ. ಯಾರದೋ ಒತ್ತಡ ಇರುತ್ತದೆ. ಇದನ್ನು ಎಲ್ಲಿ ಚರ್ಚೆ ಮಾಡುವುದು? ಯಾವಾಗ ಚರ್ಚೆ ಮಾಡುವುದು?

(ಗೊಂದಲ)

**ಶ್ರೀ ಹೆಚ್.ಡಿ.ರೇವಣ್ಣ:–** ಮಾನ್ಯ ಅಧ್ಯಕ್ಷರೆ, ನಿಯಮಾವಳಿ ಪ್ರಕಾರ ಸದನ ನಡೆಸಿ.

(ಗೊಂದಲ)

**ಶ್ರೀ ಸಿದ್ದರಾಮಯ್ಯ:–** ಬೆಳಗಾವಿಯಲ್ಲಿ ಹೆಚ್ಚು ಕಬ್ಬು ಬೆಳೆಯಲಾಗುತ್ತದೆ. ಉತ್ತರ ಕರ್ನಾಟಕದಲ್ಲಿ ಹೆಚ್ಚು ಸಕ್ಕರೆ ಕಾರ್ಖಾನೆಗಳು ಇವೆ.

(ಗೊಂದಲ)

**ಅಧ್ಯಕ್ಷರು:–** ಎಲ್ಲರೂ ಒಟ್ಟಿಗೇ ಈ ರಿತಿ ಮಾತನಾಡಿದರೆ ಹೇಗೆ?

(ಗೊಂದಲ)

**ಶ್ರೀ ಸಿದ್ದರಾಮಯ್ಯ:–** ರೇವಣ್ಣನವರೂ Mention ಮಾಲಿ. ನಾನೂ ಮಾಡುತ್ತೇನೆ.

(ಗೊಂದಲ)

**ಶ್ರೀ ಹೆಚ್.ಸಿ.ಬಾಲಕೃಷ್ಣ :–** ಮಾನ್ಯ ಅಧ್ಯಕ್ಷರೆ, ನಿಯಮಾವಳಿ ಪ್ರಕಾರ ಮೊದಲು ನಮಗೆ ಮಾತನಾಡಲು ಅವಕಾಶ ಕೊಡಿ. ಅವರು ನೋಟಿಸ್ ಕೊಟ್ಟೇ ಇಲ್ಲ.

(ಗೊಂದಲ)

**ಶ್ರೀ ಟಿ.ಬಿ.ಜಯಚಂದ್ರ:–** ಇಡೀ ಜಿಲ್ಲೆಯಾದ್ಯಂತ ರೈತರು ಪ್ರತಿಭಟನೆಗೆ ನಿಂತಿದ್ದಾರೆ. ವಿಷಯ ಅತ್ಯಂತ ಗಂಭೀರವಾಗಿದೆ. ಚರ್ಚೆಗೆ ಅವಕಾಶ ಮಾಡಿಕೊಡಿ.

(ಗೊಂದಲ)

**ಅಧ್ಯಕ್ಷರು:–** ಈಗ ಮೊದಲು ಯಾರು ಪ್ರಸ್ತಾಪ ಮಾಡುತ್ತೀರಿ?

(ಗೊಂದಲ)

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಅಧ್ಯಕ್ಷರೆ, first priority ಅನ್ನು Main opposition party ಯವರಿಗೆ ಕೊಡಬೇಕು.

(ಗೊಂದಲ)

**ಶ್ರೀ ಹೆಚ್.ಸಿ. ಬಾಲಕೃಷ್ಣ :–** ಮೊದಲು ನಾವು ಅರ್ಜಿ ಕೊಟ್ಟಿದ್ದೇವೆ. ನಮಗೆ ಮೊದಲು ಅವಕಾಶ ಕೊಡಿ.

(ಗೊಂದಲ)

**ಅಧ್ಯಕ್ಷರು:–** ಮೊದಲು ಅವರು ಪ್ರಸ್ತಾಪ ಮಾಡಲಿ ಆನಂತರ ಪ್ರಶ್ನೋತ್ತರ ತೆಗೆದುಕೊಳ್ಳೋಣ.

(ಗೊಂದಲ)

**ಶ್ರೀ ಎಸ್.ಸುರೇಶ್ ಕುಮಾರ್ :–** ಸುವರ್ಣಸೌಧದಲ್ಲಿ ಇದು ಮೊದಲನೇ ಪ್ರಶ್ನೋತ್ತರ. ಅದಕ್ಕೆ ಅವಕಾಶ ಕೊಡಿ.

(ಗೊಂದಲ)

**ಅಧ್ಯಕ್ಷರು:-** ನಾನು ಅವಕಾಶ ಕೊಡುತ್ತೇನೆ. ಪ್ರಶ್ನೋತ್ತರ ಆದ ನಂತರ ತಕ್ಷಣವೇ ಚರ್ಚೆ ಪ್ರಾರಂಭ ಮಾಡೋಣ.

(ಗೊಂದಲ)

**ಶ್ರೀ ಸಿದ್ದರಾಮಯ್ಯ:-** ಪ್ರಶ್ನೋತ್ತರ ಮಾಡಿ. ಮೊದಲು preliminary submission ಮಾಡುವುದಕ್ಕೆ ಅವಕಾಶ ಕೊಡಿ. preliminary submission ಮಾಡುವುದಕ್ಕೆ ಅವಕಾಶವನ್ನೇ ಕೊಡದೇ ಹೋದರೆ ಇಲ್ಲಿ 400 ಕೋಟಿ ಖರ್ಚು ಮಾಡಿ ಪ್ರಯೋಜನ ಏನು? ಇಲ್ಲಿ ಏಕೆ ಸದನ ನಡೆಯಬೇಕು? Please allow us to make a preliminary submission. Afterwards you can take a decision.

(ಗೊಂದಲ)

**ಅಧ್ಯಕ್ಷರು :-** ಆಯಿತು, ಈಗ ಯಾರು ಪ್ರಸ್ತಾಪ ಮಾಡುತ್ತೀರಿ?

(ಗೊಂದಲ)

**ಶ್ರೀ ಹೆಚ್.ಸಿ.ಬಾಲಕೃಷ್ಣ :-** ಮಾನ್ಯ ಅಧ್ಯಕ್ಷರೆ, ನಾವು ಮೊದಲು ನೋಟಿಸ್ ಕೊಟ್ಟಿದ್ದೇವೆ. ಅದಕ್ಕಾಗಿ ನಮಗೆ ಮೊದಲು ಅವಕಾಶ ಕೊಡಿ.

(ಗೊಂದಲ)

**ಅಧ್ಯಕ್ಷರು :-** ಇದನ್ನೇ ಚರ್ಚೆ ಮಾಡುತ್ತಿದ್ದರೆ ಹೇಗೆ? ಈಗ ಮೊದಲು ಅವರು ಮಾಡಲಿ ಆನಂತರ ತಾವು ಮಾಡಿ. ಇಬ್ಬರೂ ಮಾಡಿ.

(ಗೊಂದಲ)

**ಶ್ರೀ ಟಿ.ಬಿ.ಜಯಚಂದ್ರ :-** ಬೆಳಗಾವಿಯಲ್ಲಿ ಅಧಿವೇಶನ ನಡೆಯಬೇಕಾದಾಗ, ಬೆಳಗಾವಿಯ ರೈತ ಸಂಘಟನೆಯವರು ಪ್ರತಿಭಟನೆ ಮಾಡುತ್ತಿರುವಾಗ, ಅವರನ್ನು convince ಮಾಡುವ ರೀತಿಯಲ್ಲಿ ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ....

(ಗೊಂದಲ)

**ಶ್ರೀ ಹೆಚ್.ಸಿ.ಬಾಲಕೃಷ್ಣ** :– ಮಾನ್ಯ ಅಧ್ಯಕ್ಷರೆ, ದಯಮಾಡಿ ನಿಯಮಾವಳಿ ಪ್ರಕಾರ ನಮಗೆ ಮೊದಲು ಅವಕಾಶ ಕೊಡಬೇಕು. ನಾವು ಅವರಿಗಿಂತ ಮೊದಲು ನೋಟಿಸ್ ಕೊಟ್ಟಿದ್ದೇವೆ. ಅವರು ವಿರೋಧ ಪಕ್ಷದ ನಾಯಕರಾಗಿದ್ದಾರೆ ಎಂದು ಯಾವಾಗಲಾದರೂ ನೋಟಿಸ್ ಕೊಡುವ ಪ್ರಶ್ನೆ ಅಲ್ಲ. ನಿಯಮಾವಳಿ ಪ್ರಕಾರ ನಮಗೆ ಅವಕಾಶ ಕೊಡಿ.

(ಗೊಂದಲ)

**ಅಧ್ಯಕ್ಷರು**:– ಮೊದಲು ವಿರೋಧಪಕ್ಷದ ನಾಯಕರು submission ಮಾಡಿದ ಮೇಲೆ ತಾವು ಮಾಡಿ. ಪ್ರಶ್ನೋತ್ತರ ಆದ ನಂತರ ತಕ್ಷಣ 69 ಗೆ convert ಮಾಡಿ ಚರ್ಚೆ ಮಾಡೋಣ.

(ಗೊಂದಲ)

**ಶ್ರೀ ಹೆಚ್.ಡಿ.ರೇವಣ್ಣ**:– ಮಾನ್ಯ ಅಧ್ಯಕ್ಷರೆ, ನಾನು ಬೆಳಗ್ಗೆ 10.00 ಗಂಟೆಗೆ ನಿಯಮ 60 ರಡಿಯಲ್ಲಿ ಚರ್ಚೆ ನಡೆಸಬೇಕೆಂದು ನೋಟಿಸ್ ಕೊಟ್ಟಿದ್ದೇನೆ.

(ಗೊಂದಲ)

**ಅಧ್ಯಕ್ಷರು**:– ನಾನು ಚರ್ಚೆಗೆ ಒಪ್ಪಿಕೊಂಡಿದ್ದೇನಲ್ಲಾ?

(ಗೊಂದಲ)

**ಶ್ರೀ ಹೆಚ್.ಡಿ.ರೇವಣ್ಣ**:– ಇದು ಅತ್ಯಂತ ಗಂಭೀರವಾದಂತಹ ವಿಷಯ. ಅವರು ಚರ್ಚೆ ಮಾಡಲು ನೋಟಿಸ್ ಕೊಟ್ಟಿಲ್ಲ. ಅವರಿಗೆ ಅವಕಾಶ ಕೊಡುತ್ತೇನೆ ಎಂದು ತಾವು ಹೇಳಿದರೆ ಏನರ್ಥ?

(ಗೊಂದಲ)

**ಅಧ್ಯಕ್ಷರು**:– ಅವರು ನೋಟಿಸ್ ಕೊಟ್ಟಿದ್ದಾರೆ.

(ಗೊಂದಲ)

**ಶ್ರೀ ಹೆಚ್.ಸಿ. ಬಾಲಕೃಷ್ಣ:**– ಈಗ ನೋಟಿಸ್ ಕೊಟ್ಟಿದ್ದಾರೆ.

(ಗೊಂದಲ)

**ಅಧ್ಯಕ್ಷರು:**– ಈಗ ಕೊಟ್ಟಿಲ್ಲ. ಆಗಲೇ ಕೊಟ್ಟಿದ್ದಾರೆ.

(ಗೊಂದಲ)

**ಶ್ರೀ ಹೆಚ್.ಡಿ. ರೇವಣ್ಣ:**– ನಾವು ಕೊಟ್ಟಮೇಲೆ ಅವರು ಕೊಟ್ಟಿದ್ದಾರೆ. ನಾನು ಈಗ ಮೊದಲು ಪ್ರಸ್ತಾಪ ಮಾಡುತ್ತೇನೆ.

(ಗೊಂದಲ)

**ಅಧ್ಯಕ್ಷರು:**– ಚರ್ಚೆಗೆ ಅವಕಾಶ ಕೊಟ್ಟಿದ್ದೇನೆ. ಪ್ರಶ್ನೋತ್ತರ ಆದ ಮೇಲೆ ಚರ್ಚೆಯನ್ನು ಪ್ರಾರಂಭ ಮಾಡೋಣ. ಈಗ ಮೊದಲು ಪ್ರಶ್ನೋತ್ತರ ಮುಗಿಸೋಣ.

## 4. ಪ್ರಶ್ನೋತ್ತರ

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮೂಲಕ ನೀಡಲಾದ ಉತ್ತರಗಳು.**

**ಅಧ್ಯಕ್ಷರು:**– ಮಾನ್ಯ ರಮೇಶ್ ಬಂಡಿಸಿದ್ದೇಗೌಡರು ಮಾತನಾಡು–ವುದು.

**ಶ್ರೀ ಎ.ಬಿ. ರಮೇಶ್ ಬಂಡಿಸಿದ್ದೇಗೌಡ:**– ಪ್ರಶ್ನೆ ಸಂಖ್ಯೆ 1(65) ಅನ್ನು ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರಿಗೆ ಕೇಳಲು ಇಚ್ಛಿಸುತ್ತೇನೆ.

**ಅಧ್ಯಕ್ಷರು:**– ಮಾನ್ಯ ಸಚಿವರು ಉತ್ತರ ಕೊಡಲು ಕಾಲಾವಕಾಶ ಕೇಳಿದ್ದಾರೆ.

(ಗೊಂದಲ)

**ಶ್ರೀ ಹೆಚ್.ಸಿ. ಬಾಲಕೃಷ್ಣ:**– ಐತಿಹಾಸಿಕ ಅಧಿವೇಶನದ ಮೊದಲನೇ ಪ್ರಶ್ನೆಗೇ ಸರ್ಕಾರ ಕಾಲಾವಕಾಶ ಕೇಳಿದರೆ ನಾವು ಏನು ಮಾಡಬೇಕು?

(ಗೊಂದಲ)